ವಾರದ ಪತ್ರ

## ಮಂಗಳಗೌರಿ ಮತ್ತು ಐಪಿಎಸ್!

ಇಡೀ ಒಂದು ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಐಪಿಎಸ್ ಅಧಿಕಾರಿಯದಾಗಿರುತ್ತದೆ. ಇಂತಹ ಅಧಿಕಾರಿಯನ್ನು 'ಮಂಗಳ ಗೌರಿ ಮದುವೆ' ಎಂಬ ಧಾರಾವಾಹಿಯಲ್ಲಿ ಬಫೂನಿನಂತೆ ಬಿಂಬಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯನ್ನು ಸಾಮಾನ್ಯ ಪೊಲೀಸ್ ಠಾಣೆಯಂತೆ ಚಿತ್ರಿಸಿದ್ದಾರೆ. ಎಸ್‌ಪಿ ಕಾರ್ಯಾಲಯಕ್ಕೂ ಪೊಲೀಸ್ ಠಾಣೆಗೂ ಇರುವ ವ್ಯತ್ಯಾಸ ಏನೆಂಬುದನ್ನು ಅರಿಯದ ನಿರ್ದೇಶಕರು ವೀಕ್ಷಕರಿಗೂ ಸಹ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ.

ಪೊಲೀಸ್ ಇಲಾಖೆಯ ವಿಚಾರವಾಗಿ ಧಾರಾವಾಹಿಯ ಕತೆ ಹೆಣೆಯುವವರು ಕಾನೂನು ಮತ್ತು ನಿಯಮಗಳ ಅರಿವಿಲ್ಲದೆ ವೀಕ್ಷಕರನ್ನೂ ಸಹ ದಾರಿ ತಪ್ಪಿಸುತ್ತಿರುವುದು ವಿಪರ್ಯಾಸ.

—ಪಿ.ಜೆ. ರಾಘವೇಂದ್ರ, ಮೈಸೂರು

## ತಪ್ಪು ಸ್ತೋತ್ರ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಭುವಿ ತನ್ನ ಕನಸಿನಲ್ಲಿ ಕಂಡ ಅನಿಷ್ಟ ನಿವಾರಣೆಗಾಗಿ ತನ್ನ ಮನೆಯಲ್ಲಿರುವ ಚೌಡೇಶ್ವರಿ ದೇವಿಯ ಪ್ರತಿಮೆಯ ಮುಂದೆ ಹೀಗೆ ಪ್ರಾರ್ಥಿಸುತ್ತಾಳೆ. 'ಓಂ ತ್ರ್ಯಂಬಕಮ್ (ಮುಕ್ಕಣ್ಣ ಮೂರು ಕಣ್ಣುಗಳಿರುವ) ಯಜಾಮಹೆ....ಆದರೆ ಇದು ಶಿವ (ರುದ್ರ)ನನ್ನು ಕುರಿತು ಪ್ರಾರ್ಥಿಸುವ ಮೃತ್ಯುಂಜಯ ಮಂತ್ರ. ಆದರೆ ಈ ಸಂದರ್ಭದಲ್ಲಿ ದೇವಿ ಸ್ತೋತ್ರ ಪಠಿಸುವುದು ಸಮಂಜಸವಲ್ಲವೇ?

—ಬ.ವೀ. ಶೀಲವಂತ ತಾಳಿಕೋಟೆ

## ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ

ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್' ಗೇಮ್ ಶೋಧ ಒಂದು ಆಟದಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ವೇದಿಕೆಯ ಮೇಲಿರುವ ಮಣ್ಣಿನ ಮಡಿಕೆಗಳನ್ನು ಕೈಯಲ್ಲಿರುವ ಬೆತ್ತದಿಂದ ಒಡೆಯುವುದು. ಖಂಡಿತ ಇದೊಂದು ಅದ್ಭುತ ಆಟ ನಿಜ. ಆದರೂ ಸಹ, ಕುಂಬಾರನೊಬ್ಬ ಪರಿಶ್ರಮದಿಂದ ತಯಾರಿಸಿದ ಮಡಿಕೆ ಒಡೆಯುವ ಬದಲಿಗೆ ಹಾಳಾದ ಡಬ್ಬವನ್ನು ಬಳಸುವುದು ಸೂಕ್ತವಲ್ಲವೇ? 'ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ' ಎಂಬುದು ಕೇವಲ ಗಾದೆ ಮಾತ್ರವಾಗಿರದೇ, ಶ್ರಮ ಸಂಸ್ಕೃತಿಯ ಗೌರವ ಕೂಡ ಹೌದು. ಆಯೋಜಕರು ಬದಲಾವಣೆಯ ಬಗ್ಗೆ ಆಲೋಚಿಸಲಿ! ಆಧುನಿಕತೆಯ ನೆಪದಲ್ಲಿ ಆಟದಲ್ಲಿ ನೂತನ ವಿನ್ಯಾಸಕ್ಕೆ ನಾಂದಿ ಹಾಡಲಿ!

—ರಾಜೀವ್ ಎನ್. ಮಾಗಲ್

## ಜ್ಞಾನ ವೃದ್ಧಿ ಕಾರ್ಯಕ್ರಮ

ಝೀ ಕನ್ನಡದ 'ಸರಿಗಮಪ' 17ನೇ ಸಂಚಿಕೆಯು ಚೆನ್ನಾಗಿ ಮೂಡಿಬಂತು. ಈ ಕಾರ್ಯಕ್ರಮ ಸ್ಪರ್ಧಿಗಳಿಗೆ ಮಾತ್ರವಲ್ಲದೆ ವೀಕ್ಷಕರಿಗೂ ಸಂಗೀತದ ಜ್ಞಾನ ತುಂಬಿದ್ದಾರೆ. ಹಾಡುಗಳನ್ನು ಲಯ ಬದ್ಧವಾಗಿ, ಭಾವ ಪೂರ್ಣವಾಗಿ ಹೇಗೆ ಹಾಡಬೇಕು ಎಂದು ಪ್ರೀತಿಯಿಂದ ತಿಳಿಸುತ್ತಾರೆ.

ಸ್ಪರ್ಧಿಗಳ ತಪ್ಪುಗಳನ್ನು ನಯವಾಗಿ ತಿದ್ದುತ್ತಿದ್ದರು. ತೀರ್ಪುಗಾರರು ನ್ಯಾಯಮೂರ್ತಿಗಳಂತೆ ತೀರ್ಪು ಕೊಟ್ಟಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ, ಅಂಗವಿಕಲರಿಗೆ ಸಹಾಯ ಮಾಡಿದ್ದಾರೆ. ಅಗತ್ಯವಿರುವವರಿಗೆ ಹಂಸಲೇಖ ಉಚಿತವಾಗಿ ತಮ್ಮ ಸಂಗೀತ ಶಾಲೆಗೆ ಸೇರಿಸಿಕೊಂಡಿರುತ್ತಾರೆ. 'ಸರಿಗಮಪ'ದ ಎಲ್ಲ ಸ್ಪರ್ಧಿಗಳು ತಮ್ಮ ಕಂಠಸಿರಿಯಿಂದ ಉತ್ತಮವಾಗಿ ಹಾಡಿ ರಂಜಿಸಿದ್ದಾರೆ.ಅಂತಿಮ ಸುತ್ತಿಗೆ ಬಂದಿದ್ದ ಸ್ಪರ್ಧಿಗಳಿಗೆ ಶಾಸ್ತ್ರೀಯ ಸಂಗೀತದ ಜ್ಞಾನ ಅಪಾರವಾಗಿತ್ತು. ಆದರೆ ಅಲ್ಲಿ ನೆರೆದಿದ್ದ ಹೆಚ್ಚಿನ ಮಂದಿ ಮಾಸ್ಕ್ ಧರಿಸಿರಲಿಲ್ಲ. ಈ ನಿಯಮವನ್ನು ಅವರಿಗೆ ಮುಂಚಿತವಾಗಿ ಹೇಳಿದ್ದರೆ ಮತ್ತಷ್ಟು ಕಳೆ ಕಟ್ಟುತ್ತಿತ್ತು. ಅನುಶ್ರೀ ನಿರೂಪಣೆ ಕೆಲವು ಭಾರಿ ಕಿರಿಕಿರಿಯಾಗುತ್ತಿತ್ತು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಬಂಗಾರದಂತಹ ಕಥೆ

ಕಲರ್ಸ್ ಸೂಪರ್‌ನ 'ಮುದ್ದು ಬಂಗಾರ' ಧಾರಾವಾಹಿಯಲ್ಲಿ ಚಿಕ್ಕ ಮಕ್ಕಳು ಬೆಳೆದು ಪ್ರಾಪ್ತ ವಯಸ್ಸಿಗೆ ಬಂದಿದ್ದಾರೆ. ಒಬ್ಬೊಬ್ಬರಿಗೂ ಭಿನ್ನ ಅಭಿರುಚಿ ಇರುತ್ತದೆ. ಅದನ್ನು ಬಿಂಬಿಸುವಲ್ಲಿ ನಿರ್ದೇಶಕರು ಸಫಲರಾಗಿದ್ದಾರೆ. ಕುಟುಂಬದ ಎಲ್ಲರೂ ನೋಡಬಹುದಾದ ಉತ್ತಮ ಧಾರಾವಾಹಿ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಸ್ಥಾನಕ್ಕೆ ಗೌರವ ಇರಲಿ

ಸ್ಟಾರ್ ಸುವರ್ಣದ 'ಸಂಘರ್ಷ'ದಲ್ಲಿ ಅಸಿಸ್ಟೆಂಟ್ ಕಮಿಷನರ್ ದಂಡಾಧಿಕಾರಿ. ಅವರು ಹಳ್ಳಿಯ ನ್ಯಾಯ ಸಭೆಯ ಮುಂದೆ ಹಾಜರಾಗುವ ಮೂಲಕ ಕಂದಾಯ ಇಲಾಖೆಯ ಘನತೆ ಗೌರವವನ್ನು ಮಣ್ಣು ಪಾಲು ಮಾಡಿದುದನ್ನು ನಾವೆಲ್ಲ ಕ್ಷಮಿಸಬಹುದು. ಆದರೆ, ಆ ಇಲಾಖೆ ಕ್ಷಮಿಸದು. ಇನ್ನಾದರೂ ಇಂತಹ ವೈಚಿತ್ರ್ಯಗಳನ್ನು ವೀಕ್ಷಕರಿಗೆ ಉಣಬಡಿಸುವ ಸಾಹಸ ಬೇಡವೆಂದು ಈ ಮೂಲಕ ಹೇಳಿದರೆ, ತಪ್ಪಾಗದೆಂದು ಅಂದುಕೊಂಡಿದ್ದೇನೆ.

—ರಮಾಮಣಿ ಎಂ.ಆರ್. ಚಿತ್ರದುರ್ಗ

## ಬೇಧ ಭಾವ ಏಕೆ?

ಸ್ತ್ರೀ ಸಮಾನತೆ ಪ್ರತಿಪಾದಿಸುವ ಈ ಕಾಲದಲ್ಲಿಯೂ ಝೀ ಕನ್ನಡದ 'ಸರಿಗಮಪ' ರಿಯಾಲಿಟಿ ಶೋನಲ್ಲಿ ಕೆಲವೊಂದು ಅಭಾಸಗಳು ಎದ್ದು ಕಾಣುತ್ತಿವೆ. ಮುಖ್ಯ ತೀರ್ಪುಗಾರರಿಂದ ಹಿಡಿದು ಅಂತಿಮ ಹಂತದಲ್ಲಿ ಗೆಲ್ಲುವ ಸ್ಪರ್ಧಿಗಳವರೆಗೆ ಪುರುಷ ಪ್ರಾಧಾನ್ಯತೆಯೇ ಹೆಚ್ಚಿದಂತಿದೆ. ಇಲ್ಲಿ ಮಹಿಳಾ ತೀರ್ಪುಗಾರರಿಗೆ ಅವಕಾಶ ಕಲ್ಪಿಸಿಲ್ಲವೇಕೆ?

ಸ್ಪರ್ಧೆಯ ವಿಷಯಕ್ಕೆ ಬಂದರೆ ಅತ್ಯುತ್ತಮ ಸಾಧನೆಯನ್ನು ತೋರಿಯೂ ಮಹಿಳಾ ಅಭ್ಯರ್ಥಿಗಳು ಅಂತಿಮ ಹಂತದಲ್ಲಿ ವಂಚಿತರಾಗುವುದು ಸೋಜಿಗ ಎಂದು ನನಗೆ ಅನಿಸಿದೆ.

—ಆರ್. ಸುರೇಶ್ ಕುಮಾರ್ ಬೆಂಗಳೂರು

## ಬ್ರಹ್ಮಗಂಟಿಗೆ ತಿರುವು

ಕಲರ್ಸ್‌ನ 'ಬ್ರಹ್ಮಗಂಟು' ಎತ್ತ ಸಾಗುತ್ತಿದೆ? ಲಕ್ಕಿ ಸುಮ್ಮನೆ ಕಬಡಿ ಪ್ರಾಕ್ಟೀಸ್ ಎಂದು ಬೆಂಗಳೂರಿನಲ್ಲಿ ಬರಿ ಸುನಾಲಿ ಜೊತೆ ಒಡಾಟ, ಅದಕ್ಕೆ ಗೀತಾಳ ಉತ್ತೇಜನ. ಸುಮಾರು ವಾರಗಳಿಂದ ಕಬಡಿ ಸ್ಪರ್ಧೆ ನಡೆಯುತ್ತಲೇ ಇಲ್ಲ. ಕಥೆಗೆ ಹೊಸ ತಿರುವು ಸಿಕ್ಕಿದ್ದು ಇನ್ನೂ ಮುಗಿಯುವ ಲಕ್ಷಣ ಕಾಣುತ್ತಿಲ್ಲ.

—ಸೀತಾ ಕೇಶವ ಸಿಡ್ನಿ

## ಬಿಜ್ಜಳ ರಾಜನಲ್ಲವೆ?



ಸ್ಟಾರ್ ಸುವರ್ಣದ 'ಶ್ರೀ ಎಡೆಯೂರು ಸಿದ್ದಲಿಂಗೇಶ್ವರದ ಆರಂಭ ತುಂಬ ಚೆನ್ನಾಗಿದೆ. ಐತಿಹಾಸಿಕ ಹಾಗೂ ಪೌರಾಣಿಕ ಧಾರಾವಾಹಿಗಳನ್ನು ಮಾಡುವುದು ದುಸ್ಸಾಹಸದ ಕೆಲಸ. ಸಾಮಾಜಿಕ ಕಥೆಯಾದರೆ ಧರಿಸಿದ ಬಟ್ಟೆಯಲ್ಲೇ ಡೈಲಾಗ್ ಹೊಡೆದು ದೃಶ್ಯ ಮುಗಿಸಬಹುದು. ಐತಿಹಾಸಿಕ ಕಥೆಗಳಲ್ಲಿ ಕಾಲಮಾನಕ್ಕೆ ತಕ್ಕ ಪ್ರಸಾದನ, ಅಲಂಕಾರಕ್ಕೆ ತುಂಬ ಅಧ್ಯಯನ ಬೇಕಾಗುತ್ತದೆ. ಧಾರಾವಾಹಿಗೆ ದುಡಿಯುತ್ತಿರುವ ಎಲ್ಲರಿಗೂ ಧನ್ಯವಾದಗಳು. ಇದರಲ್ಲಿ ನಾನು ಗಮನಿಸಿದ ಒಂದೇ ಒಂದು ಲೋಪ ಎಂದರೆ ಬಿಜ್ಜಳ ಪಾತ್ರಧಾರಿಯ ಭಾವನಾತ್ಮಕ ಹಾಗೂ ಆಂಗಿಕ ಪ್ರದರ್ಶನ ಖಳ ನಟನಂತಿದೆ.

—ಹೊನ್ನಪ್ಪ, ತುಮಕೂರು